ಶ್ರೀ ಅಬ್ದುಲ್ ನಜೀರ್‌ಸಾಬ್.—ಕಡತದಲ್ಲಿ ಒಂದು ಮಾತು ಹೋಗಿದೆ. ಆ ಸದನದಲ್ಲಿ ಎದ್ದು ಏದ್ದು ಮಾತನಾಡಬಹುದು, ನಿಯಮಬಾಹಿರವಾಗಿ ನಡೆದುಕೊಳ್ಳುತ್ತಿದ್ದೀರಿ. ನಾವು ನಿಯಮ ಪ್ರಕಾರ ಮಾಡುತ್ತಿದ್ದೇವೆ ಎಂದು ಹೇಳಿದ್ದಾರೆ.....

ಶ್ರೀ ಎಂ. ವೀರಪ್ಪ ಮೊಯ್ಲಿ.—ಹಾಗಲ್ಲ, ಅಲ್ಲಿ ನಿಯಮ ಬೇರೆ ಇದೆ, ಇಲ್ಲಿ ನಿಯಮ ಬೇರೆ ಇದೆ, ನಿಯಮದಪ್ರಕಾರ ಹೋಗೋಣವೆಂದು ಹೇಳಿದ್ದೇನೆ.

ಅಧ್ಯಕ್ಷರು.—ರೂಲ್ಸ್ ಪ್ರಕಾರ ನೀವು ಏನೋ ಗುಡ್‌ನ್ಯೂಸ್ ಹೇಳಬಹುದು, ಪರ್ಸನಲ್ ಎಕ್ಸ್‌ಪ್ಲನೇಷನ್ ಅಲ್ಲ. ಒಳ್ಳೆಯ ಸುದ್ದಿ ಹೇಳಬಹುದು ಎಂದು ನಾನು ಅಲೋ ಮಾಡಿದೆ. ಪರ್ಸನಲ್ ಎಕ್ಸ್‌ಪ್ಲನೇಷನ್ ಇದೆ ಎಂದರೆ, ರೂಲ್ಸ್ ಪ್ರಕಾರ ನೋಟೀಸ್ ಕೊಡಬೇಕು, ಪರ್ಸನಲ್ ಎಕ್ಸ್‌ಪ್ಲನೇಷನ್ ಏನು ಎನ್ನುವುದರ ಕಾಪಿ ಕೊಡಬೇಕು, ಇದರ ಬಗ್ಗೆ ಹೋದಸಲ ನಾನು ರೂಲಿಂಗ್ ಕೊಟ್ಟಿದ್ದೇನೆ. ಈ ಸದನಕ್ಕೆ ಗುಡ್ ನ್ಯೂಸ್ ಹೇಳುತ್ತೀರಿ ಎನ್ನುವ ದೃಷ್ಟಿಯಲ್ಲಿ ಹೇಳಿ ಎಂದು ನಾನು ಹೇಳಿದೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾನ್ಯ ಅಧ್ಯಕ್ಷರೇ, ತಪ್ಪು ಮಾತಿಗೆ ನಾನು ತಲೆಬಾಗುತ್ತೇನೆ. ಕೆಟ್ಟಸುದ್ದಿ ಹೇಳುತ್ತೇನೆ ಎಂಬ ಭಾವನೆ ಬಂದುದಕ್ಕೆ ನನಗೆ ನೋವಾಗಿದೆ. ಸುದ್ದಿ ಕೇಳದೆ ಕೆಟ್ಟಸುದ್ದಿ ಹೇಳುತ್ತೇನೆ ಒಳ್ಳೇ ಸುದ್ದಿ ಹೇಳುತ್ತೇನೆ ಎಂದು ಹೇಗೆ ಹೇಳುವುದು, ನಾನು ಕೆಟ್ಟ ಸುದ್ದಿ ಎಲ್ಲಿ ಹೇಳಿದೆ.

ಅಧ್ಯಕ್ಷರು.—ಒಳ್ಳೆ ಸುದ್ದಿಗೂ, ಪರ್ಸನಲ್ ಎಕ್ಸ್‌ಪ್ಲನೇಷನ್‌ಗೂ ಡಿಫರೆನ್ಸ್ ಇದೆ. ಹೆಚ್ಚು ಕಡಿಮೆ ಇದೆ, ಅದಕ್ಕೆ ನಾನು ಹೇಳುತ್ತಿದ್ದೇನೆ.

ಗಮನ ಸೆಳೆಯುವ ಸೂಚನೆಗಳು

(೧) ಗೋಕಾಕ್‌ನಲ್ಲಿ ಡಿಸೆಂಬರ್ ತಿಂಗಳಲ್ಲಿ ಅತೀ ಮಳೆಯಾಗಿ ತಂಬಾಕು ಬೆಳೆ ನಾಶವಾಗಿರುವ ಬಗ್ಗೆ

† ಶ್ರೀ ಎಂ. ಎಲ್. ಮುತ್ತಣ್ಣನವರ್ (ಗೋಕಾಕ್).—ಮಾನ್ಯ ಅಧ್ಯಕ್ಷರೇ, ಗೋಕಾಕ್‌ನಲ್ಲಿ ಡಿಸೆಂಬರ್ ತಿಂಗಳಲ್ಲಿ ಅತೀ ಮಳೆಯಾಗಿ ತಂಬಾಕು ಬೆಳೆಯು ನಾಶವಾಗಿರುವ ಬಗ್ಗೆ ಮಾನ್ಯ ಕೃಷಿ ಮತ್ತು ತೋಟಗಾರಿಕೆ ರಾಜ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಸವರಾಜ್ ಪಾಟೀಲ್ ಅನ್ವರಿ (ಕೃಷಿ ಮತ್ತು ತೋಟಗಾರಿಕೆ ರಾಜ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಮೇಲ್ಕಂಡ ಗಮನಸೆಳೆಯುವ ಸೂಚನೆಗೆ ಈ ಒಂದು ಹೇಳಿಕೆಯನ್ನು ನೀಡಲು ತಮ್ಮ ಅನುಮತಿಯನ್ನು ಕೋರುತ್ತೇನೆ.

೧೯೮೬-೮೭ನೇ ಸಾಲಿನಲ್ಲಿ ಬೆಳಗಾಂ ಜಿಲ್ಲೆಯಲ್ಲಿ ೨೬,೭೫೧ ಹೆಕ್ಟೇರು ಪ್ರದೇಶದಲ್ಲಿ ಬೀಡಿ ತಂಬಾಕನ್ನು ಬೆಳೆಸಲಾಗಿದೆ ಎಂದು ಅಂದಾಜು ಮಾಡಲಾಗಿದೆ. ದಿನಾಂಕ ೨೬-೧೨-೧೯೮೬ ರಂದು ಬಂದ ಅಕಸ್ಮಿಕ ಮಳೆಯಿಂದಾಗಿ ಬೆಳಗಾಂ ಜಿಲ್ಲೆಯ ಗೋಕಾಕ್ ತಾಲ್ಲೂಕಿನ ೨೧ ಹಳ್ಳಿಗಳಲ್ಲಿನ ೬೧೩ ಹೆಕ್ಟೇರ್ ಪ್ರದೇಶದ ತಂಬಾಕು ಬೆಳೆಗೆ ಹಾನಿಯುಂಟಾಗಿದೆ ಎಂದು ಪ್ರಥಮ ವರದಿಗಳಿಂದ ತಿಳಿದು ಬಂದಿದೆ.

ಅಕಾಲಿಕ ಮಳೆಯಿಂದ ಅಥವಾ ಹವಾಮಾನ ವೈಪರಿತ್ಯದಿಂದಾಗುವ ಬೆಳೆ ಹಾನಿ ಪರಿಹಾರ ಒದಗಿಸಲು ಯಾವುದೇ ಯೋಜನೆ ಜಾರಿಯಲ್ಲಿರುವುದಿಲ್ಲ.

ಬೆಳೆಗಾರರು ಬೆಳೆ ಸಾಲವನ್ನು ಪಡೆದಿದ್ದರೆ, ತಂಬಾಕು ಬೆಳೆಗೆ ಬೆಳೆ ವಿಮಾ ಯೋಜನೆಯಡಿಯಲ್ಲಿ ಪರಿಹಾರ ಸಿಗುತ್ತಿದ್ದಿತು. ತಂಬಾಕು ಬೆಳೆಯು ಈ ಯೋಜನೆಯೊಳಗೆ ಸೇರಿಲ್ಲದಿರುವುದರಿಂದ ಯಾವ ಪರಿಹಾರವನ್ನು ಕೊಡಲು ಸಾಧ್ಯವಿರುವುದಿಲ್ಲ.

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.